a) No

b) Does not arise in view of reply to Clause (a).

ಭ್ರಷ್ಟಾಚಾರ ನಿರ್ಮೂಲನ

269 (351) ಶ್ರೀ ಕೆ. ವಸಂತ ಬಂಗಾರೆ (ಬೆಳ್ತಂಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಭ್ರಷ್ಟಾಚಾರ ನಿರ್ಮೂಲನದ ವಿಷಯದಲ್ಲಿ ಸರಕಾರ ಜನತೆಗೆ ಆಶ್ವಾಸನೆ ನೀಡಿದ್ದು ಆ ಬಗ್ಗೆ ಕೈಕೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) —ಅ) ಸರ್ಕಾರಿ ನೌಕರರ ಮೇಲೆ ಮಾಡುವ ಭ್ರಷ್ಟಾಚಾರ ಆರೋಪಗಳನ್ನು ತನಿಖೆ ಮಾಡಿ ಅವರ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳುವ ಕಾರ್ಯವನ್ನು ಸರ್ಕಾರದಿಂದ ರಚಿಸಲ್ಪಟ್ಟಿರುವ ರಾಜ್ಯ ಜಾಗೃತ ಆಯೋಗವು ನಿರ್ವಹಿಸುತ್ತಿದೆ. ಜಾಗೃತಾ ಆಯೋಗದ ವ್ಯಾಪ್ತಿಯು ಸರ್ಕಾರಿ ನೌಕರರಿಗೆ ಸೀಮಿತವಾಗದೆ, ವಿಶ್ವ ವಿದ್ಯಾನಿಲಯಗಳು, ನಗರ ಸಭೆಗಳು ವಿವಿಧ ಮಂಡಳಿಗಳು ಇತ್ಯಾದಿಗಳಲ್ಲಿರುವ ನೌಕರರಿಗೂ ಅನ್ವಯಿಸುತ್ತದೆ.

ಸರ್ಕಾರವು ಜನತೆಗೆ ಆಶ್ವಾಸನೆ ನೀಡಿದ ಪ್ರಕಾರ ಲೋಕಾಯುಕ್ತ ಮತ್ತು ಉಪಲೋಕಾಯುಕ್ತವನ್ನು ಸ್ಥಾಪಿಸುವ ಸಲುವಾಗಿ ಆದ್ಯಾದೇಶವನ್ನು ದಿನಾಂಕ 7-1-1984 ರಂದು ಹೊರಡಿಸಲಾಗಿದೆ. ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲು ಈ ಲೋಕಾಯುಕ್ತ ಉಪಲೋಕಾಯುಕ್ತಕ್ಕೆ ವಿಶಾಲ ವ್ಯಾಪ್ತಿ ಹಾಗೂ ಅಧಿಕಾರವನ್ನು ಕೊಡಲಾಗಿದೆ.

ಲಿಖಿತದ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯನ್ನು ವಿಸ್ತರಿಸುವುದು

248 (843) ಶ್ರೀ ವಿ. ಎಸ್. ಆಚಾರ್ಯ (ಉಡಪಿ) — ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆ ಈಗಾಗಲೇ 24 ಎಕರೆ ಸ್ಥಳ ಹೊಂದಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ) ಮೇಲಿನ ಆಸ್ಪತ್ರೆಗೆ ಸೇರಿದ ಸ್ಥಳದ ಪೈಕಿ ಅರ್ಧಭಾಗಕ್ಕೂ ಹೆಚ್ಚಿನ ಸ್ಥಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದರೂ ಕೂಡ ಬೆಂಗಳೂರಿನಲ್ಲಿ 5 ರಸ್ತೆಗಳ ಮಧ್ಯದಲ್ಲಿ ಈಗಾಗಲೇ ತಲೆಯೆತ್ತಿ ನಿಂತಿರುವ ಹೋಸ ಕಟ್ಟಡಗಳ ಪ್ರದೇಶವಾದ ಹೋಸ ತರಗುಪೇಟೆ, ಮೈಸೂರು ರಸ್ತೆಯ ಭಾಗಗಳು ಮತ್ತು ಸೀತಾಪತಿ ಅಗ್ರಹಾರದ ಕೆಲವು ಭಾಗಗಳನ್ನು ಮೇಲಿನ ಉದ್ದೇಶಕ್ಕಾಗಿ ಸರ್ಕಾರದವರು ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ನಿಜವೆ ;

ಈ) ಹಾಗಿದ್ದಲ್ಲಿ ಹಾಲಿ ಮೇಲಿನ ಜಾಗದಲ್ಲಿ ವಾಸಿಸುತ್ತಿರುವ ನಾಗರೀಕರನ್ನು ವಸತಿ ಹೀನರಾಗಿ ಮಾಡುವ ಬದಲು ಆಸ್ಪತ್ರೆ ಕಟ್ಟಡ ಕಟ್ಟಲು ಬೇರೆ ಸೂಕ್ತವಾದ ಜಮೀನನ್ನು ಸರ್ಕಾರದವರು ವಶಪಡಿಸಿಕೊಳ್ಳಲು ಉದ್ದೇಶಿಸಿರುವರೆ ?

ಉ) ಹಾಗಿಲ್ಲದಿದ್ದಲ್ಲಿ ಹಾಲಿ ವಿಕ್ಟೋರಿಯಾ ಆಸ್ಪತ್ರೆ ಕಟ್ಟಡವನ್ನು ವಿಸ್ತರಿಸುವ ಬದಲು ನಗರದ ವಿವಿದೆಡೆಯಲ್ಲಿ ಪ್ರತ್ಯೇಕ ಆಸ್ಪತ್ರೆಗಳನ್ನು ಪ್ರಾರಂಭಿಸುವ ವಿಷಯವನ್ನು ಸರಕಾರದವರು ಪರಿಶೀಲಿಸುವರೆ ?

ಶ್ರೀ ಪಿ. ಜಿ. ಆರ್. ಸಿಂದ್ಯ (ಆರೋಗ್ಯ ಮತ್ತು ಕುಟುಂಬಕಲ್ಯಾಣ ರಾಜ್ಯಸಚಿವರು).—ಅ) ಹೌದು

ಆ) ಸುಮಾರು 1 ಎಕರೆಗಳಷ್ಟು ಜಮೀನು ಉಳಿದಿದ್ದು ಇದರಲ್ಲಿ ಹಾರ್ಟಿಗಳು, ರಸ್ತೆಗಳು ಮತ್ತು ಈಗ ಇರುವ ಕಟ್ಟಡಗಳಿಗೆ ಹೊಂದಿಕೊಂಡಿರುವ ಜಾಗಗಳು ಮಾತ್ರ ಇವೆ. ಆದ್ದರಿಂದ ಈ ಆಸ್ಪತ್ರೆಯನ್ನು ವಿಸ್ತರಿಸಲು ಜಾಗ ಉಳಿದಿಲ್ಲ.

ಇ) ಹೌದು ಸ್ವಾಧೀನದ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಈ) ಈ ಜಾಗವು ಆಸ್ಪತ್ರೆಯ ವಿಸ್ತರಣಕ್ಕೆ ಅದರ ನೌಕರರ ವಸತಿ ಗೃಹ, ದಾದಿಯರ ವಸತಿಗೃಹ ಇಂಟರ್‌ನೀಸ್ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ವಸತಿ ಗೃಹಗಳಿಗಾಗಿ ಬೇಕಾಗಿರುತ್ತದೆ. ಬೇರೆ ಕಡೆ ಇರುವಂತಹ ಜಾಗವು ಮೇಲೆ ಹೇಳಿದ ಅನುಕೂಲತೆಗಳನ್ನು ಕಲ್ಪಿಸಲು ಸೂಕ್ತವಾಗಿರುವುದಿಲ್ಲ.

ಉ) ವಿಕ್ಟೋರಿಯಾ ಆಸ್ಪತ್ರೆಯು ಅಳತೆ ಮೀರಿ ರೋಗಿಗಳಿಂದ ತುಂಬಿ ಹೋಗಿದೆ. ಆದುದರಿಂದ ಹೊಸ ಆಸ್ಪತ್ರೆಗಳನ್ನು ನಗರದ ಬೇರೆ ಬೇರೆ ಪ್ರದೇಶಗಳಲ್ಲಿ ಹಂತ ಹಂತವಾಗಿ ಹಣದ ಅನುಕೂಲತೆ ಮತ್ತು ಜಾಗ ದೊರೆಯುವುದನ್ನು ಕಂಡುಕೊಂಡು ಕಟ್ಟಬೇಕಾಗಿದೆ.

ನಗರದ ಬೇರೆ ಬೇರೆ ಸ್ಥಳಗಳಲ್ಲಿ ಪ್ರತ್ಯೇಕ ಆಸ್ಪತ್ರೆಗಳನ್ನು ಕಟ್ಟುವವರಿಗೆ, ಈಗಿದ್ದ ವಿಕ್ಟೋರಿಯಾ ಆಸ್ಪತ್ರೆಯನ್ನು ವಿಸ್ತರಿಸದೆ ವಿಧಿಯಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗನ ಕಾಯಿಲೆ ಹರಡದಿರುವುದು

249 (279) ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) – ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :–

ಅ) ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಮಂಗನ ಕಾಯಿಲೆಯಿಂದ ಪೀಡಿತವಾಗಿದೆ ;

ಆ) ಯಾವ ಯಾವ ತಾಲ್ಲೂಕುಗಳಲ್ಲಿ ಮಂಗನ ಕಾಯಿಲೆ ಹರಡದಂತೆ, ಮುಂಜಾಗ್ರತೆ ಕ್ರಮ ಕೈಗೊಳ್ಳಲಾಗಿದೆ ? ಹಾಗಿದ್ದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ;

ಇ) ಸದರೀ ಕಾಯಿಲೆ ತಡೆಯಲು ನಿಶ್ಚಿತವಾದ ಯಾವದಾದರೂ ಔಷಧ ಇದೆಯೇ ;

ಶ್ರೀ ಪಿ. ಜಿ ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).–

ಅ) ಬೆಳ್ತಂಗಡಿ ತಾಲ್ಲೂಕು

ಆ) ದಕ್ಷಿಣ ಕನ್ನಡ ಜಿಲ್ಲೆಯ ಸೂಳ್ಯ, ಪುತ್ತೂರು, ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಈ ಕಾಯಿಲೆಯ ಸುಳಿವನ್ನು ಪತ್ತೆಮಾಡಲು ಈ ಕೆಳಕಂಡ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಆರೋಗ್ಯ ಇಲಾಖೆ ಸಿಬ್ಬಂದಿ ಮತ್ತು ಇತರೇ ಇಲಾಖೆಯ ಸಿಬ್ಬಂದಿ ಅದರಲ್ಲೂ ಆರಣ್ಯ ಇಲಾಖೆ ಸಿಬ್ಬಂದಿಯವರಿಗೆ ಮಂಗಗಳ ಸಾವನ್ನು ಕೂಡಲೇ ಈ ಇಲಾಖೆಗೆ ತಿಳಿಸಬೇಕಾಗಿ ಕೋರಲಾಗಿದೆ.

2) ಚಿಗಟುಗಳ ಸಂಗ್ರಹಣೆ ಕಾರ್ಯಕ್ರಮವನ್ನು ಮೇಲ್ಕಂಡ ತಾಲ್ಲೂಕುಗಳಲ್ಲಿ ಕೆಲವು ಕಡೆ ತೆಗೆದುಕೊಂಡು ಪರೀಕ್ಷಿಸಿರುತ್ತದೆ. ಇದುವರೆವಿಗೂ ಮಂಗನ ಕಾಯಿಲೆಯ ಸುಳಿವಿನ ಯಾವ ಸೂಚನೆಗಳು ದೊರೆತಿರುವುದಿಲ್ಲ

3) ಕಾಡುಗಳನ್ನು ಕಡಿಯುವ ಕಾರ್ಯಕ್ರಮವಿದ್ದಲ್ಲಿ, ಆರಣ್ಯ ಇಲಾಖೆಯವರು ಆರೋಗ್ಯ ಇಲಾಖೆಗೆ ಮುಂಚಿತವಾಗಿ ತಿಳಿಸಬೇಕಾಗಿ ಕೋರಲಾಗಿದೆ.

ಇ) ಸದರಿ ಕಾಯಿಲೆಗೆ ಯಾವ ನಿರ್ಬಂಧಕವಾಗಿ ಔಷಧಿಯನ್ನು ಇನ್ನು ವರೆಗೆ ಕಂಡುಹಿಡಿಯಲಾಗಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ರಾಜ್ಯ ಪತ್ರಾಂಕಿತ ಅಧಿಕಾರಿಗಳು

250 (613)ಶ್ರೀ ಆರ್. ಎನ್. ನಾಯ್ಕ (ಬಟ್ಕಳ್).-ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ;

ಅ) 1983 ನೇ ಸಾಲಿನ ಪ್ರಾರಂಭದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ರಾಜ್ಯ ಪತ್ರಾಂಕಿತ ಅಧಿಕಾರಿಗಳ ಸಂಖ್ಯೆ ಎಷ್ಟು ; ಅವರಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಅಧಿಕಾರಿಗಳ ಸಂಖ್ಯೆ ಎಷ್ಟು ;

ಆ) 1984 ನೇ ಸಾಲಿನ ಪ್ರಾರಂಭದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುವ ರಾಜ್ಯ ಪತ್ರಾಂಕಿತ ಅಧಿಕಾರಿಗಳ ಸಂಖ್ಯೆ ಎಷ್ಟು ಅವರಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಅಧಿಕಾರಿಗಳ ಸಂಖ್ಯೆ ಎಷ್ಟು ; ಅವಧಿ ಪೂರ್ವವಾಗಿ ವರ್ಗಾಯಿಸಲ್ಪಟ್ಟ ಹಿಂದುಳಿದ ವರ್ಗಕ್ಕೆ ಸೇರಿದ ರಾಜ್ಯ ಪತ್ರಾಂಕಿತ ಅಧಿಕಾರಿಗಳ ಸಂಖ್ಯೆ ಎಷ್ಟು ;

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) 363 ಪತ್ರಾಂಕಿತ ಅಧಿಕಾರಿಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದವರು 80.

ಆ) 359 ಪತ್ರಾಂಕಿತ ಅಧಿಕಾರಿಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದವರ ಸಂಖ್ಯೆ 83.

ಹಿಂದುಳಿದ ವರ್ಗಕ್ಕೆ ಸೇರಿದ 6 ಪತ್ರಾಂಕಿತ ಅಧಿಕಾರಿಗಳನ್ನು ಅವಧಿ ಪೂರ್ವವಾಗಿ ವರ್ಗಾಯಿಸಲಾಗಿದೆ.